# ಸುಮುಖ
## ಭಟ್ಟರ ಗರಡಿಯ ಹೊಸ ಪ್ರತಿಭೆ

**ರಂಗಭೂಮಿಯ ಅನುಭವದೊಂದಿಗೆ ಸಿನಿಮಾರಂಗಕ್ಕೆ ಕಾಲಿಟ್ಟಿರುವ ನಟ ಸುಮುಖ, ಯೋಗರಾಜ ಭಟ್ಟರ 'ಮನದ ಕಡಲು' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಹೊಸತನಕ್ಕೆ ತುಡಿಯುವ, ಸವಾಲುಗಳೆಂದರೆ ಇಷ್ಟ ಎನ್ನುವ ಈ ಹುಡುಗನಿಗೆ ಸಿನಿಮಾರಂಗದಲ್ಲಿ ಬೆಳೆಯಬೇಕೆಂಬ ಹುರುಪು.**

■ ಸುಮಲತಾ ಎನ್



ಚಿಕ್ಕವಯಸ್ಸಿಗೇ ರಂಗಭೂಮಿಯ ಮೆಟ್ಟಿಲೇರಿದ ನಟ ಸುಮುಖ ಹುಟ್ಟಿ ಬೆಳೆದದ್ದೂ ನಟನಾ ಕಲೆಯನ್ನೇ ನೆಚ್ಚಿಕೊಂಡಿದ್ದ ಕುಟುಂಬದಲ್ಲಿ. ರಂಗಭೂಮಿ ಹಾಗೂ ಕಿರುತೆರೆಯಲ್ಲಿ ಗುರುತಿಸಿಕೊಂಡಿರುವ ಶಶಿಕುಮಾರ್ ಹಾಗೂ ನಂದಿತಾ ಅವರ ಮಗನಾದ ಸುಮುಖ ಕೂಡ ಅಭಿನಯವನ್ನೇ ತಮ್ಮ ಪಾಲಿಗೆ ಆರಿಸಿಕೊಂಡವರು.

ಐದನೇ ವಯಸ್ಸಿಗೇ ರಂಗಭೂಮಿ ಒಡನಾಟ ಬೆಸೆದುಕೊಂಡ ಅವರು 'ಅಭಿನಯ ತರಂಗ' ಒಳಗೊಂಡಂತೆ ಹಲವು ತಂಡಗಳಲ್ಲಿ ನಾಟಕಗಳನ್ನು ಮಾಡಿದರು, ಅಭಿನಯ ಕಲೆ ಕಲಿತರು. ನಟನೆಯೆಡೆಗೆ ಆಕರ್ಷಣೆ ಹುಟ್ಟಲು ನಾಟಕಗಳು ಪ್ರೇರಣೆಯಾಗಿ ಮನಸ್ಸು ತುಂಬಿದ್ದವು. ಅಭಿನಯದಲ್ಲಿಯೇ ತೊಡಗಿಸಿಕೊಳ್ಳಬೇಕೆಂಬ ತುಡಿತ ಹೆಚ್ಚಾದಂತೆ ಪಿಯುಸಿ ಮುಗಿಯುತ್ತಿದ್ದಂತೆ ತರಬೇತಿಗಾಗಿ ಮುಂಬೈ ಹಾದಿ ಹಿಡಿದರು. ಮುಂಬೈನಲ್ಲಿ ಕಳೆದ ಹತ್ತು ವರ್ಷಗಳು ಅವರಲ್ಲಿ ಸಿನಿಮಾರಂಗದ ಬಗ್ಗೆ ಆತ್ಮವಿಶ್ವಾಸವನ್ನು ತುಂಬಿಕೊಟ್ಟವು.

"ಮುಂಬೈಗೆ ಹೋಗಿ ಪೃಥ್ವಿ ಥಿಯೇಟರ್ ಸೇರಿಕೊಂಡೆ. ಅಲ್ಲಿ ಸಾಕಷ್ಟು ರಂಗಕರ್ಮಿಗಳ ನಾಟಕಗಳಿಗೆ ಬಣ್ಣ ಹಚ್ಚಿದೆ. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ಹಲವು ನಾಟಕಗಳಲ್ಲಿ ಅಭಿನಯಿಸಿದೆ. ಖಾಸಗಿ ಚಾನಲ್ ಒಂದರ ಥಿಯೇಟರ್‌ನಲ್ಲಿ ಸ್ಟೇಜ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿದೆ. ಈ ಎಲ್ಲ ಅನುಭವಗಳನ್ನು ಒಟ್ಟು ಮಾಡಿ ನಾನೇ ಒಂದು ಸಿನಿಮಾ ಮಾಡಬೇಕೆಂದು ಯೋಜಿಸಿ 'ಫಿಸಿಕ್ಸ್ ಟೀಚರ್' ಎಂಬ ಸಿನಿಮಾ ನಿರ್ದೇಶಿಸಿ, ನಟಿಸಿದೆ" ಎಂದು ತಮ್ಮ ಪುಟ್ಟ ಪರಿಚಯ ತೆರೆದಿಟ್ಟರು ಸುಮುಖ.

ಕೊರೊನಾ ಸಮಯದಲ್ಲಿ ಬಿಡುಗಡೆಯಾಗಿದ್ದ 'ಫಿಸಿಕ್ಸ್ ಟೀಚರ್' ಸಿನಿಮಾ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಕೆಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿತ್ತು. ಆದರೆ ನಿರ್ದೇಶನದಲ್ಲಿ ತಮಗಿರುವ ಅನುಭವ, ಜ್ಞಾನ ಸಾಲದು ಎಂಬುದು ಮನವರಿಕೆಯಾದದ್ದೇ, ನಟನೆಯತ್ತ ಸಂಪೂರ್ಣ ಗಮನ ಹರಿಸಲು ನಿರ್ಧರಿಸಿದರು.

ಈ ನಡುವೆ ಸಿನಿಮಾಗಳಲ್ಲಿ ಅವಕಾಶಕ್ಕಾಗಿ ಒದ್ದಾಟ ಮುಂದುವರೆದಿತ್ತು. ಒಂದೆರಡು ಸಿನಿಮಾಗಳ ಮಾತುಕತೆ ನಡೆದರೂ ಯಾವುದೂ ಕೈಹತ್ತಲಿಲ್ಲ. ಆ ಸಮಯದಲ್ಲೇ ಅಚಾನಕ್ಕೆಂಬಂತೆ 'ಮನದ ಕಡಲು' ಅವಕಾಶ ಒಲಿದುಬಂದಿದ್ದು.

'ಮುಂಗಾರು ಮಳೆ' ಸಿನಿಮಾ ರೀತಿ ಹೊಸಬರನ್ನೇ ಹಾಕಿಕೊಂಡು ಸಿನಿಮಾ ಮಾಡುವ ಉದ್ದೇಶ ಇಟ್ಟುಕೊಂಡಿದ್ದ ಯೋಗರಾಜ ಭಟ್ಟರು 'ಮನದ ಕಡಲು' ಆಡಿಷನ್ ಆರಂಭಿಸಿ, ಹೊಸ ಮುಖ ಸಿಗದೇ, ಯಾರೂ ಒಪ್ಪಿಗೆ ಆಗದೇ ಸುಮ್ಮನಿದ್ದರು. ಆ ಸಮಯದಲ್ಲೇ ಸುಮುಖ ಅವರ ಬಗ್ಗೆ ಆಕಸ್ಮಿಕವಾಗಿ ತಿಳಿದುಬಂದಿದ್ದು. ಒಂದು ಪ್ರಯತ್ನ ಮಾಡಿಯೇ ನೋಡುವ ಎಂದು ಆಡಿಷನ್ ಕರೆದದ್ದು ಫಲ ಕೊಟ್ಟಿತ್ತು – ಭಟ್ಟರಿಗೂ, ಸುಮುಖ ಅವರಿಗೂ.

ಕನ್ನಡ ಸಿನಿಮಾರಂಗದಲ್ಲಿ ಹೊಸ ಅಲೆಯನ್ನೇ ಹುಟ್ಟುಹಾಕಿದ್ದ 'ಮುಂಗಾರು ಮಳೆ' ತೆರೆಕಂಡ 18 ವರ್ಷಗಳ ನಂತರ ಇ. ಕೃಷ್ಣಪ್ಪ ಹಾಗೂ ಯೋಗರಾಜ ಭಟ್ಟರ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಸಿನಿಮಾ ಎಂದ ಮೇಲೆ ಸುಮುಖ ಪಾಲಿಗೆ ಜವಾಬ್ದಾರಿಯೂ ಹೆಚ್ಚೇ ಇತ್ತು. ಆದರೆ ರಂಗಭೂಮಿ ಕಲಿಸಿಕೊಟ್ಟಿದ್ದ ಪಾಠಗಳು ಅವರಿಗೆ ಪ್ರೇರಣೆಯಾಗಿದ್ದವು.

"ರಂಗಭೂಮಿ ನನಗೆ ಹಲವು ವಿಷಯಗಳನ್ನು ಕಲಿಸಿಕೊಟ್ಟಿದೆ. ನಾಟಕ ಒಂದೇ ಟೇಕ್‌ನಲ್ಲಿ ಆಗುತ್ತೆ. ಸಿನಿಮಾದಲ್ಲಿ ಹಲವು ಟೇಕ್‌ಗಳು ಇರುತ್ತವೆ. ರಂಗಭೂಮಿಯ ಅನುಭವ ಇದ್ದವರಿಗೆ ಅಷ್ಟು ಕಷ್ಟ ಎನಿಸುವುದಿಲ್ಲ. ನನಗೆ ಸವಾಲುಗಳೆಂದರೆ ತುಂಬಾ ಇಷ್ಟ. ನಿರ್ದೇಶಕರು ನಟನಿಂದ ಏನು ಬಯಸುತ್ತಾರೆ ಎನ್ನುವುದು ನನಗೆ 'ಫಿಸಿಕ್ಸ್ ಟೀಚರ್' ಸಿನಿಮಾದಿಂದ ಅನುಭವಕ್ಕೆ ಬಂದಿದ್ದರಿಂದ ಜಾಗ್ರತೆಯಿಂದಿದ್ದೆ" ಎಂದು ನಗುತ್ತಾರೆ.

'ಯೋಗರಾಜ್ ಸರ್ ಜೊತೆ ಕೆಲಸ ಮಾಡುವಾಗ ವಿದ್ಯಾರ್ಥಿಗಳ ರೀತಿ ಇದ್ದೆವು. ಸ್ನೇಹಿತರಂತೆಯೇ ನಮ್ಮನ್ನು ನೋಡಿಕೊಂಡರು. ಅವರೊಂದಿಗೆ ಕೆಲಸ ಮಾಡಿದ್ದು ಅತ್ಯುತ್ತಮ ಅನುಭವ' ಎಂದು ಅನುಭವಗಳನ್ನು ಹಂಚಿಕೊಂಡರು.

ಟ್ರಾವೆಲ್ ಅಡ್ವೆಂಚರ್ ಲವ್‌ಸ್ಟೋರಿ ಜಾನರ್‌ನ 'ಮನದ ಕಡಲು' ಸಿನಿಮಾದಲ್ಲಿ ಲವ್ಲಿ ಹುಡುಗನಾಗಿ ನಟಿಸಿರುವ ಸುಮುಖ ಅವರಿಗೆ, ಹೊಡಿ ಬಡಿ ಸಿನಿಮಾಗಳು ಅಷ್ಟಕ್ಕಷ್ಟೆ. ಕೌಟುಂಬಿಕ ಸಿನಿಮಾದಲ್ಲಿ ತೊಡಗಿಕೊಳ್ಳಲು ಇಷ್ಟ ಎನ್ನುತ್ತಲೇ, 'ಮಕ್ಕಳಿಗೆ ಐಡಲ್ ಎಂದು ಈಗ ಯಾರೂ ಕಾಣುತ್ತಿಲ್ಲ. ನನಗೆ ಆ ಜಾಗ ತುಂಬುವ ಆಸೆ. ಮಕ್ಕಳು ಬಂದು ಖುಷಿಪಟ್ಟು ನೋಡಿದರೆ ಮನೆ ಹುಡುಗನ ಥರ ಆಗುತ್ತೇನೆ ಎಂಬ ಬಯಕೆ' ಎನ್ನುತ್ತಾರೆ.

ಮತ್ತೊಂದು ಹೊಸ ಸಿನಿಮಾಗೂ ಸುಮುಖ ಒಪ್ಪಿಕೊಂಡಿದ್ದು, ಆ ಸಿನಿಮಾ ಘೋಷಣೆ ಸದ್ಯದಲ್ಲೇ ಆಗಲಿದೆ. ■